ಅಧ್ಯಾಯದವರೆಗೆ ಅಗ್ನಿಚಯನ, ಅಗ್ನ್ಯಾಧಾನ, ಗರುಡಾಕಾರವೇ ಮುಂತಾದ ಆಕಾರದಲ್ಲಿ ವೇದಿನಿರ್ಮಾಣಕ್ರಮ, ಶತರುದ್ರೀಯ ಯಾಗ, ವಸೋರ್ಧಾರಾ ಹೋಮ, ರಾಷ್ಟ್ರಭೃತ್ ಹೋಮ ಇತ್ಯಾದಿಗಳು ವಿವರಿಸಲ್ಪಟ್ಟಿವೆ. ಹತ್ತೊಂಬತ್ತನೇ ಅಧ್ಯಾಯದಿಂದ ಪರಿಶಿಷ್ಟವು ಆರಂಭವಾಗುತ್ತದೆ. ಇಪ್ಪತ್ತು ಮತ್ತು ಇಪ್ಪತ್ತೊಂದನೇ ಅಧ್ಯಾಯಗಳಲ್ಲಿ ಸೋಮಸಂಗ್ರಹ ಕ್ರಮವು ವಿಚಾರಿಸಲ್ಪಟ್ಟಿದೆ. ಇಪ್ಪತ್ತೆರಡರಿಂದ ಇಪ್ಪತ್ತೈದನೇ ಅಧ್ಯಾಯದವರೆಗೆ ಅಶ್ವಮೇಧವು ವಿವರಿಸಲ್ಪಟ್ಟಿದೆ. ತದನಂತರದ ಭಾಗಗಳಲ್ಲಿ ಪುರುಷಮೇಧ, ಸರ್ವಮೇಧ, ಪುತ್ರಮೇಧಾದಿಗಳು ವಿವರಿಸಲ್ಪಟ್ಟಿವೆ. ಅಂತಿಮ ಅಧ್ಯಾಯವು ಈಶಾವಾಸ್ಯೋಪನಿಷತ್ತಿನಿಂದ ಕೂಡಿದೆ. ಈ ಎಲ್ಲಾ ಅಂಶಗಳು ಕೃಷ್ಣಯಜುರ್ವೇದದಲ್ಲಿಯೂ ಕೂಡ ವಿವರಿಸಲ್ಪಟ್ಟಿವೆ.

**ವೇದದ ಹಿರಿಮೆ :** ಪಾಶ್ಚಾತ್ಯ ಸಂಶೋಧಕರು ವೇದದ ರಚನಾ ಕಾಲವನ್ನು ಸಂಶೋಧಿಸುವ ಕಾರ್ಯದಲ್ಲಿ ಅನೇಕ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಭಾರತೀಯ ಪರಂಪರೆಯಲ್ಲಿ ವೇದವು ಅಪೌರುಷೇಯವೆಂದೇ ಪ್ರಸಿದ್ಧಿಯನ್ನು ಹೊಂದಿದೆ. ಅಂದರೆ ವೇದವು ಯಾವುದೋ ಒಂದು ವ್ಯಕ್ತಿಯಿಂದ ರಚಿಸಲ್ಪಟ್ಟಿದೆ ಎಂಬುವುದನ್ನು ಭಾರತೀಯ ದಾರ್ಶನಿಕರು ಒಪ್ಪುವುದಿಲ್ಲ. ಇದಕ್ಕೆ ಬದಲಾಗಿ ವೇದವನ್ನು ಋಷಿಮುನಿಗಳು ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ ಎಂದು ಭಾರತೀಯ ದಾರ್ಶನಿಕರು ಪ್ರತಿಪಾದಿಸುತ್ತಾರೆ.

**ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।**
**ಶಿವಾದ್ಯಾ ಋಷಿಪರ್ಯನ್ತಾಃ ಸ್ಮರ್ತಾರೋಽಸ್ಯ ನ ಕಾರಕಾಃ ॥**

"ವಾಕ್ಕು ಅಥವಾ ವೇದವು ಅನಾದಿಯಾಗಿದೆ; ಅದಕ್ಕೆ ಅಂತ್ಯವೂ ಇಲ್ಲ. ಹೀಗಾಗಿ ಅದು ನಿತ್ಯವಾದದು. ಅದು ಸ್ವಯಂಭೂ ಎನಿಸಿದ ಪರಮಾತ್ಮನ ಮಾತಿನ ಮೂಲಕ ಹೊರಬಂದದ್ದಾಗಿದೆ. ಶಿವನಿಂದ (ಭಗವಂತನಿಂದ) ಹಿಡಿದು ಋಷಿಗಳವರೆಗೆ ಎಲ್ಲರೂ ಅದನ್ನು ನೆನೆಪಿಸಿಕೊಳ್ಳುವವರೇ ಹೊರತು, ಅದನ್ನು ಉತ್ಪತ್ತಿ ಮಾಡಿದವರಲ್ಲ."

ಈ ರೀತಿಯ ಪುರಾಣವಾಕ್ಯಗಳು ಕೂಡ ವೇದವು ನಿತ್ಯ ಹಾಗೂ ಅಪೌರುಷೇಯ ಎಂಬುದಾಗಿ ಸಾರುತ್ತವೆ.

ವೇದೋಕ್ತಕರ್ಮಗಳ ಅನುಷ್ಠಾನಕ್ಕಾಗಿ ಶ್ರೌತಸೂತ್ರಗಳು ಋಷಿಮುನಿಗಳಿಂದ ರಚಿಸಲ್ಪಟ್ಟಿವೆ. ಈ ಶ್ರೌತಸೂತ್ರಗಳು ಪ್ರತಿ ವೇದಕ್ಕೂ ಪ್ರತ್ಯೇಕವಾಗಿಯೇ ರಚಿಸಲ್ಪಟ್ಟಿವೆ. ಅವುಗಳಲ್ಲಿ ಕೃಷ್ಣಯಜುರ್ವೇದಕ್ಕೆ ಆಪಸ್ತಂಬ, ಶ್ರೌತಸೂತ್ರ, ಬೋಧಾಯನೀಯ ಶ್ರೌತಸೂತ್ರ ಹಾಗು ಸತ್ಯಾಷಾಡೀಯ ಶ್ರೌತಸೂತ್ರಗಳು ರಚಿತವಾಗಿವೆ. ಅದೇರೀತಿಯಾಗಿ ಶುಕ್ಲಯಜುರ್ವೇದ ಶಾಖೆಗೆ ಕಾತ್ಯಾಯನ ಶ್ರೌತಸೂತ್ರವು ದೊರಕುವುದು.

ವೇದವು ಕೇವಲ ಧಾರ್ಮಿಕ ಕ್ರಿಯೆಗಳಿಗಷ್ಟೇ ಉಪಯುಕ್ತವಾಗಿಲ್ಲ. ಬದಲಾಗಿ ಅಗ್ನಿಮಂಥನ, ಕೃಷಿ, ಆಯುಷ್ಕರ್ಮ, ಕಟ್ಟಿಗೆಯನ್ನು ತಯಾರಿಸುವಿಕೆ, ಸ್ವಯಂಪಾಕ, ಗೃಹವಸ್ತುಗಳ ನಿರ್ಮಾಣ, ಕುಂಬಾರನ ಕೆಲಸ, ನೇಯ್ಗೆಯವನ ಕೆಲಸ, ಲೋಹಕಾರನ ಕಾರ್ಯ, ಹೊಲಿಗೆಯವನ ಕೌಶಲತೆ, ಪಶುಪಾಲನೆ, ರಥನಿರ್ಮಾಣ, ಸಂಗೀತವಾದ್ಯವೇ ಮುಂತಾದ ವಿಷಯಗಳು ವೇದದಲ್ಲಿ ಸುಸ್ಪಷ್ಟವಾಗಿ ಪ್ರತಿಬಿಂಬಿಸಲ್ಪಟ್ಟಿವೆ. ಸಮಸ್ತ ಜ್ಞಾನಾಗಾರವಾಗಿರುವ ವೇದಾಧ್ಯಯನದಿಂದ ಸುಸಂಸ್ಕೃತರಾದವರು ಇಹಪರದಲ್ಲಿಯೂ ಕೂಡ ಧರ್ಮಾನುಷ್ಠಾನದಿಂದ ಹುಟ್ಟುವ ಸುಖವನ್ನು ಹೊಂದುತ್ತಾರೆ ಎಂಬುವುದರಲ್ಲಿ ಯಾವುದೇ ಸಂದೇಹವಿಲ್ಲ.

**Dear Friends,**

**In 'The Gospel of Sri Ramakrishna' and 'The Gospel of the Holy Mother' , we come across the names of many blessed souls who came in contact with Sri Ramakrishna and Sri Sarada Devi. Needless to say, many people are interested to know about the descendants of those blessed souls—where they are living, what they are doing, and other details. If you have authentic information about the descendants of the disciples and devotees of Sri Ramakrishna and Holy Mother, please send that to us. We would process the information and make it available to those who are interested in the matter.**

**- The General Secretary, Ramakrishna Math & Mission**

**ಪ್ರೀತಿಯ ಸ್ನೇಹಿತರೇ,**

**'ಶ್ರೀರಾಮಕೃಷ್ಣ ವಚನವೇದ' ಮತ್ತು 'ಶ್ರೀಶಾರದಾದೇವಿ ವಚನವೇದ' – ಈ ಗ್ರಂಥಗಳಲ್ಲಿ ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ಶಾರದಾದೇವಿಯವರ ಸಂಪರ್ಕಕ್ಕೆ ಬಂದ ಅನೇಕ ಪುಣ್ಯಾತ್ಮರ ಹೆಸರುಗಳನ್ನು ಕಾಣುತ್ತೇವೆ. ಈ ಭಾಗ್ಯವಂತರ ವಂಶಕ್ಕೆ ಸೇರಿದವರ ಬಗ್ಗೆ ತಿಳಿದುಕೊಳ್ಳಲು ಅನೇಕ ಜನರಿಗೆ ಸಹಜವಾಗಿಯೇ ಆಸಕ್ತಿ ಇರುತ್ತದೆ. 'ಅವರು ಎಲ್ಲಿ ನೆಲೆಸಿದ್ದಾರೆ?', 'ಅವರೀಗ ಏನು ಮಾಡುತ್ತಿದ್ದಾರೆ?'– ಮುಂತಾದ ವಿವರಗಳು ಅದರಲ್ಲಿ ಸೇರಿರುತ್ತವೆ. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ಶಾರದಾದೇವಿಯವರ ಶಿಷ್ಯರು ಮತ್ತು ಭಕ್ತರ ವಂಶಕ್ಕೆ ಸೇರಿದವರ ಬಗ್ಗೆ ತಮ್ಮಲ್ಲೇನಾದರೂ ಅಧಿಕೃತ ಮಾಹಿತಿ ಇದ್ದಲ್ಲಿ, ದಯವಿಟ್ಟು ನಮಗೆ ಕಳಿಸಿಕೊಡಿ. ಈ ಮಾಹಿತಿಯನ್ನು ನಾವು ಪರಿಷ್ಕರಿಸಿ, ಈ ವಿಷಯದಲ್ಲಿ ಆಸಕ್ತಿಯುಳ್ಳವರಿಗೆ ಒದಗಿಸುತ್ತೇವೆ.** **– ಪ್ರಧಾನ ಕಾರ್ಯದರ್ಶಿಗಳು, ರಾಮಕೃಷ್ಣ ಮಠ ಮತ್ತು ಮಿಷನ್**

**ವಿಳಾಸ:** **The General Secretary, Ramakrishna Math & Mission,**
**P.O. Belur Math, Dist. Howrah, West Bengal -711202**
**Phone: (033)2654-1144, 1180; Fax: (033) 2654-4346**
**Email: rkmhq@belurmath.org; rkmhqoffice@gmail.com**